Sri P. M. NADGOUDA.—I may bring to the notice of the Hon'ble House that we have passed the Abrogation of the Continuance of elections where provision has been made for the holding of elections.

Sri DIGAMBARA RAO B. KALMANKAR.—You stated that these taluka development committees are formed. May I know what was the basis of forming these taluka committees and on what basis the representatives are taken to that committee?

Sri P. M. NADGOUDA.—They are only *ad hoc* committees constituted on the basis of the recommendations of the appropriate authorities. They are not treated as taluka development Boards.

Sri G. CHANDRAKANTH.—You said that taluk advisory boards constituted are expected to adviss. I want to know whether the advice given by this board is carrying any legal sanctity.

Sri P. M. NADGOUDA.—It is in the nature of an advisory committee. It has no statutory status. They are in the nature of advisory committees and they give advice.

ಶ್ರೀ ಎಂ. ನಾಗಪ್ಪ.—ತಾಲ್ಲೂಕು ಬೋರ್ಡ್‌ನಲ್ಲಿದ್ದಂಥ ಸದಸ್ಯರುಗಳನ್ನು ಅಡ್ವೈಜರಿ ಬೋರ್ಡ್ ಸದಸ್ಯರುಗಳೆಂದು ಮಾಡಿದ್ದೀರೋ ಅಥವಾ ಬೇರೆ ಯಾರನ್ನಾದರೂ ಅಲ್ಲಿಗೆ ನೇಮಕ ಮಾಡಿದ್ದೀರೋ? ಅದರಲ್ಲಿ ಏನಾದರೂ ಹೆಚ್ಚಿಗೆ ಕಾಂಗ್ರೆಸ್ ಸದಸ್ಯರನ್ನೇ ನೇಮಕ ಮಾಡಿರುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದವರಲ್ಲಿರತಕ್ಕ ಪಾಲಿಸಿ ಪ್ರಕಾರ ತಾಲ್ಲೂಕು ಬೋರ್ಡ್ ಸದಸ್ಯರು ಯಾರು ಇದ್ದಾರೆಯೋ ಅವರನ್ನೇ ಅಡ್ವೈಜರಿ ಬೋರ್ಡಿಗೆ ಹಾಕಿದ್ದೇವೆ. ಅವರ ಪೈಕಿಯೇ ಒಬ್ಬರನ್ನು ಆ ಅಡ್ವೈಜರಿ ಬೋರ್ಡಿನ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಅಲ್ಲಿನ ಸದಸ್ಯರಲ್ಲಿ ಯಾರಾದರೂ ನತ್ತಿದ್ದರೆ, ಆಗ ಮಾತ್ರ ಬೇರೆಯವರನ್ನು ಹಾಕಲಾಗುತ್ತದೆ.

ಶ್ರೀ ಚಿಕ್ಕೇಗೌಡ.—ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ಮಾಡುತ್ತೇವೆಂದು ಮೇಲ್ಮನೆಯಲ್ಲಿ ಹೇಳಿದ್ದೀರಿ. ಜಿಲ್ಲಾ ಪರಿಷತ್ ಮಸೂದೆಯೊಂದನ್ನು ತರುತ್ತೇವೆಂದೂ ಸಹ ಹೇಳಿದ್ದೀರಿ. ಅದನ್ನು ಯಾವಾಗ ತರುತ್ತೀರಿ? ಅದಕ್ಕೇನಾದರೂ ಅವಧಿಯನ್ನು ನಿಗದಿ ಮಾಡಿ ತರುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಆದಷ್ಟು ಶೀಘ್ರದಲ್ಲಿ ತರುತ್ತೇವೆ.

Mr. DEPUTY SPEAKER.—Question Hour is over. Now Short Notice Question.

SHORT NOTICE QUESTION AND ANSWER

36. Sri T. R. SHAMANNA (Fort).—

Will the Minister for Food and Civil Supplies be pleased to state:—

(*a*) whether it is a fact that the Government has purchased large quantities of sugar after the sugar distribution system was modified recently; if so, the quantity so purchased and rate at which the same was purchased;

(*b*) the rate at which they have sold the abovesaid sugar;

(*c*) the quantity of sugar sold and the balance of stock left with them?

A.—Sri B. D. JATTI (Minister for Food and Civil Supplies).—

(*a*) 39,085 quintals at Rs. 400 per quintal have been purchased.

(*b*) Rs. 365 per quintal until 23rd February 1968, when the sale of free market sugar by Government was stopped throughout the State. It has been resumed in Bangalore Informal Rationing area from 11th March 1968, and in the Districts from 20th March 1968, at Rs. 375 per quintal.

(*c*) 1,879 quintals 80 kgs. were sold balance of stock is 37,205 quintals 20 kgs.

ಶ್ರೀ ಟಿ. ಆರ್. ಶಾಮಣ್ಣ.—ಈಗ ಸಕ್ಕರೆ ವ್ಯಪಹಾರದಿಂದ 39,085 ಕ್ವಿಂಟಾಲುಗಳನ್ನು 400 ರೂಪಾಯಿಗಳಿಗೆ ಒಂದು ಕ್ವಿಂಟಾಲ್‌ನಂತೆ ಕೊಂಡು 365ರಿಂದ 375 ರೂಪಾಯಿಗಳಿಗೆ ಮಾರಿದ್ದರಿಂದ ಸುಮಾರು 10 ಲಕ್ಷ 17 ಸಾವಿರ ರೂಪಾಯಿಗಳವರೆಗೆ ನಷ್ಟವಾಗಿದೆ. ಆದ್ದರಿಂದ ಈ ನಷ್ಟದ ವ್ಯಾಪಾರವನ್ನು ಏಕೆ ಮಾಡುತ್ತಿದ್ದೀರಿ? ಇದನ್ನು ಯಾವ ರೀತಿ ತುಂಬುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ಆಹಾರ ಶಾಖೆ ನೋ ಪ್ರಾಫಿಟ್, ನೋ ಲಾಸ್' ಬೇಸಿಸ್ ಮೇಲೆ ಕೆಲಸ ಮಾಡುತ್ತಾ ಇದೆ. ಹೊರಗಡೆ ನಾವು ಕೊಂಡುಕೊಂಡ ಬೆಲೆಗಿಂತ ಕಡಿಮೆ ಇದ್ದರೆ ಆ ಕಾಲಕ್ಕೆ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗಿದೆ. ಆದರೆ ವರ್ಷದ ಅಂತ್ಯಕ್ಕೆ ಲಾಭ ನಷ್ಟವೇನೂ ಇಲ್ಲ. ಸಕ್ಕರೆಯನ್ನು ಒಟ್ಟಿಗೆ ತೆಗೆದುಕೊಂಡಿದ್ದು 39 ಸಾವಿರ ಕ್ವಿಂಟಾಲ್. ಅದರೊಳಗೆ 365ರಂತೆ ಮಾರಿದ್ದು 1879 ಕ್ವಿಂಟಾಲ್. ನಂತರ 375ರಂತೆ ಮಾರಿದ್ದು 1039 ಕ್ವಿಂಟಾಲ್. ನಮ್ಮ ಹತ್ತಿರ ಈಗ 2918 ಕ್ವಿಂಟಾಲ್ ಇದೆ. ಇವತ್ತಿನ ದಿವಸ 390ರಂತೆ ಮಾರಾಟ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟ ಹಾಗೆ ಅದರಿಂದ ನಷ್ಟವಾಗುವುದಿಲ್ಲ. 172ರಂತೆ ಮಾರಾಟ ಮಾಡುತ್ತಿದ್ದುದನ್ನು 175ರಂತೆ ಕಂಜ್ಯೂಲ್ ದರ ಮಾಡಿದ್ದೇವೆ. ಅದರಿಂದ ಒಂದು ತಿಂಗಳಿಗೆ 3 ಲಕ್ಷ ರೂಪಾಯಿಗಳು ಬರುತ್ತಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಂತೆ ನಷ್ಟವಾಗಿಲ್ಲ.

ಶ್ರೀ ಎಸ್. ಶಿವಪ್ಪ.—ಸರ್ಕಾರದವರು ಏಕಾಏಕಿ ಹೀಗೆ ಮಾರ್ಕೆಟ್ಟಿನಲ್ಲಿ ಕಂಪೆನಿಯವರ ಹತ್ತಿರ 39 ಸಾವಿರ ಕ್ವಿಂಟಾಲನ್ನು 400 ರೂಪಾಯಿ ಒಂದು ಕ್ವಿಂಟಾಲ್‌ನಂತೆ ವ್ಯಾಪಾರ ಮಾಡಿದ ಔಚಿತ್ಯವಾದರೂ ಏನು?

ಶ್ರೀ ಬಿ. ಡಿ. ಜತ್ತಿ.—ಯಾವ ತರಹ ಕೇಂದ್ರ ಸರ್ಕಾರದವರು ಇದಕ್ಕೆ ಕಂಟ್ರೋಲ್ ಮಾಡಿದರೋ ಆ ರೀತಿ ಸಕ್ಕರೆ ಕಂಪೆನಿಯವರು ಸಕ್ಕರೆ ಮಾರಾಟ ಮಾಡಲು 450ರಿಂದ 500 ರೂಪಾಯಿಗಳವರೆಗೆ ದರ ಜಾಸ್ತಿ ಮಾಡಿ ಟೆಂಡರ್ ಕರೆದಾಗ, ವಿಶೇಷವಾಗಿ ಬೊಂಬಾಯಿ ಕಡೆಯವರು ಅದನ್ನು ಕೊಂಡರು. ಇಲ್ಲಿ ಬಲ್ಕ್ ಕನ್ಸ್ಯೂಮರ್ಸ್ ಸಿಗಲಿಲ್ಲ. ಆದ್ದರಿಂದ ಕೂಡಲೇ ಸೆಕೇಫ್ಟ್ ಮೆಜರ್ಸ್ ತೆಗೆದುಕೊಂಡು ಕ್ವಿಂಟಾಲಿಗೆ 400 ರೂಪಾಯಿಗಳಂತೆ ನಾವು ಕೊಂಡುಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಈಗ 400 ರೂಪಾಯಿಗಳಂತೆ ಕೊಂಡು 365 ರೂಪಾಯಿಗಳಂತೆ ಮಾರಾಟ ಮಾಡಿದ್ದೀರಿ. ಅದರಿಂದ ಸ್ವಲ್ಪಮಟ್ಟಿಗೆ ಜನಗಳಿಗೆ ಸಬ್ಸಿಡೈಜ್ ಮಾಡಿದ್ದೀರೆಂಬುದಾಗಿ ಹೇಳಿದರೆ ಅದೇನೂ ತಪ್ಪಾಗಲಾರದು. ಈಗ 365 ರೂಪಾಯಿಗಳೂ ಸಹ ಬಹಳ ಜಾಸ್ತಿಯಾಗಿರುವುದರಿಂದ, ಜನಗಳು ಒಂದು ಕ್ವಿಂಟಾಲಿಗೆ 365 ರೂಪಾಯಿಗಳಂತೆ ಕೊಂಡುಕೊಳ್ಳಬೇಕಾಗುತ್ತದೆ. ಆದ್ದರಿಂದ ಅದನ್ನು ಇನ್ನೂ ಸಬ್ಸಿಡೈಜ್ ಮಾಡಿ ಇನ್ನೂ ಕಡಿಮೆ ದರದಲ್ಲಿ ಮಾರಾಟ ಮಾಡಲು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಮೊದಲು ಸ್ವಲ್ಪ ಸಕ್ಕರೆಯನ್ನು 350 ರೂಪಾಯಿಗಳ ದರದಲ್ಲಿ ಮಾರಾಟ ಮಾಡಲಾಯಿತು. ಅನಂತರ ಸ್ವಲ್ಪ ಸಕ್ಕರೆಯನ್ನು 375ರ ದರದಲ್ಲಿ ಮಾರಾಟ ಮಾಡಲಾಯಿತು. ಈಗ ಅದರ ಬೆಲೆ 390ಕ್ಕೆ ಏರಿರುವುದರಿಂದ ಆ ಬೆಲೆಯನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಕಡಲೇಬೇಳೆ ಮಾರಾಟದಲ್ಲಿ ಸರ್ಕಾರದವರು ಮೂಟೆಯೊಂದಕ್ಕೆ 25 ರೂಪಾಯಿಗಳನ್ನು ಲೂಟಿ ಮಾಡಿರುವುದರಿಂದ ಬಂದ ಲಾಭದಲ್ಲಿ ಸಕ್ಕರೆಯಲ್ಲಾಗಿರುವ ನಷ್ಟವನ್ನು ಭರ್ತಿ ಮಾಡಿಕೊಳ್ಳಬೇಕೆಂದು ಸರ್ಕಾರದವರು ತೀರ್ಮಾನ ಮಾಡಿರುವುದು ನಿಜವೇ?

ಶ್ರೀ ಬಿ. ಡಿ. ಜತ್ತಿ.—ಹಾಗೆ ಲೂಟಿ ಮಾಡತಕ್ಕ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಆ ವಿಷಯ ಸರ್ಕಾರಕ್ಕೆ ಗೊತ್ತಿಲ್ಲ. ಆದರೆ ನಾವು ಹೆಚ್ಚಿನ ದರದಲ್ಲಿ ಕೊಂಡಿದ್ದನ್ನು ಕಡಮೆ ದರದಲ್ಲಿ ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎನ್. ಹುಚ್ಚಪ್ಪಾಸ್ತಿಗೌಡ.—ಕೇಂದ್ರ ಸರ್ಕಾರದವರು ಹಾಲಿ ಓಪನ್ ಮಾರ್ಕೆಟ್ಟಿನಲ್ಲಿ ಸಕ್ಕರೆ ಮಾರಾಟವಾಗುತ್ತಿರುವುದನ್ನು ಅಂದರೆ ಈ ಪದ್ಧತಿಯನ್ನು ಬದಲಾಪಣೆ ಮಾಡತಕ್ಕ ಅಭಿಪ್ರಾಯಕ್ಕೆ ಬಂದಿರುವುದರಿಂದ ಅವರು ಈ ವಿಚಾರದಲ್ಲಿ ರಾಜ್ಯ ಸರ್ಕಾರದವರ ಸಲಹೆಯನ್ನೇನಾದರೂ ಕೇಳಿದ್ದಾರೆಯೇ? ಕೇಳಿದ್ದರೆ ನಮ್ಮ ಸರ್ಕಾರದವರೇನು ಸಲಹೆ ಮಾಡಿದ್ದಾರೆ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಸರ್ಕಾರದವರೇನು ಸಲಹೆಯನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ಇನ್ನೂ ಹೆಚ್ಚಿನ ಮುಟ್ಟದಲ್ಲಿ ಸಕ್ಕರೆಯನ್ನು ಡೀ ಕಂಟ್ರೋಲ್ ಮಾಡತಕ್ಕ ಅಭಿಪ್ರಾಯಕ್ಕೆ ಬಂದಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಕೆ. ಎಚ್. ಪಾಟೀಲ್.—ಸಕ್ಕರೆಯ ಬೆಲೆ ಕಡಮೆ ಇದ್ದಾಗ ನಮ್ಮ ಸರ್ಕಾರದವರು ಅದನ್ನು ಹೆಚ್ಚಿನ ದರದಲ್ಲಿ ಕೊಂಡ ಆ ನೀತಿಯೇನಿವೆ ಅದೇ ನೀತಿಯನ್ನು ಅನುಸರಿಸಿ ಇನ್ನು ರೈತರಿಂದ ಪಡೆಯತಕ್ಕ ಇತರೇ ಕಾಳುಕಡ್ಡಿಗಳನ್ನೂ ಅದೇ ರೀತಿ ಕೊಳ್ಳುತ್ತಾರೆಯೇ? ಇಲ್ಲವೇ ಆ ರೀತಿ ಪದ್ಧತಿಯನ್ನು ವಜಾ ಮಾಡುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಎರಡನ್ನೂ ಮಾಡಲು ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಸರ್ಕಾರದವರು ಒದಗಿಸಿರತಕ್ಕ (ಅ) ಮತ್ತು (ಇ) ಉತ್ತರಗಳಲ್ಲಿ ಹೇಳಿರತಕ್ಕ ಸಕ್ಕರೆಯನ್ನು ಎಷ್ಟು ಕಾಲಕ್ಕೆಂದು ಕೊಂಡಿದ್ದಾರೆ? ಇದು ನಮಗೆ ಒಂದು ವರ್ಷಕ್ಕೆ ಸಾಕಾಗುತ್ತದೆಯೇ?

ಶ್ರೀ ಬಿ. ಡಿ. ಜತ್ತಿ.—ನಮಗೆ ಮಾರ್ಚ್-ಏಪ್ರಿಲ್ ಕೋಟ ಮತ್ತು ಏಪ್ರಿಲ್-ಮೇ ತಿಂಗಳ ಎರಡು ಕೋಟಾಗಳ ಸಕ್ಕರೆ ಕೈಲಿದೆ. ಇಷ್ಟು ನಮಗೆ ಒಂದು ವರ್ಷಕ್ಕೆ ಸಾಕು.

ಶ್ರೀ ಟಿ. ಆರ್. ಶಾಮಣ್ಣ.—ಮೊದಲು ಸಕ್ಕರೆ ಬೆಲೆ ಓಪನ್ ಮಾರ್ಕೆಟ್ಟಿನಲ್ಲಿ 350 ರೂಪಾಯಿಗಳಿತ್ತು. ಅನಂತರ ಅದು 375ಕ್ಕೆ ಏರಿ ಈಗ 390ಕ್ಕೆ ಹೋಗಿದೆ. ಈ ಬೆಲೆ ಹೆಚ್ಚಾಗದಂತೆ ಇವನ್ನು ತಡೆಗಟ್ಟಲು ತಾವು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು?

ಶ್ರೀ ಬಿ. ಡಿ. ಜತ್ತಿ.—ಓಪನ್ ಮಾರ್ಕೆಟ್ ಬೆಲೆಯನ್ನು ನಾವು ಕಂಟ್ರೋಲ್ ಮಾಡುವುಕ್ಕಾಗುವುದಿಲ್ಲ. ಅದು ಸಪ್ಲೈ ಮತ್ತು ಡಿಮ್ಯಾಂಡುಗಳ ಮೇಲೆ ಹೋಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರದವರು ಈ ದಿವನ ರಾಜ್ಯದ ಮೂರೆ ಮೂರೆಗಳಲ್ಲಿರತಕ್ಕ ಸೊಸೈಟಿಗಳಿಗೆ ಓಪನ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡತಕ್ಕ 60 ಪರ್ಸೆಂಟ್ ಸಕ್ಕರೆಯನ್ನೂ ಮತ್ತು ಹೊಮೆಸ್ಟಿಕ್ ಉದ್ದೇಶಗಳಿಗೆ ಕೊಡತಕ್ಕ ಕಂಟ್ರೋಲ್ ದರದ 40 ಪರ್ಸೆಂಟ್ ಸಕ್ಕರೆ ಈ ಎರಡನ್ನೂ ಅವರು ಮಿಕ್ಸ್ ಮಾಡಿ ದುರುಪಯೋಗ ಮಾಡುವದಕ್ಕೆ ಅವಕಾತವಿಲ್ಲವೇ?

ಶ್ರೀ ಬಿ. ಡಿ. ಜತ್ತಿ.—ಆ ಎರಡನ್ನೂ ಮಾರಾಟ ಮಾಡಲು ಒಬ್ಬರಿಗೆ ಎಂದೂ ಕೊಡುವುದಿಲ್ಲ. ಆದುದರಿಂದ ಆ ದುರುಪಯೋಗಕ್ಕೆ ಅವಕಾತವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಓಪನ್ ಮಾರ್ಕೆಟ್ ಬೆಲೆ ಎಂದು ಏನು ಹೇಳುತ್ತಿದ್ದಾರೋ ಅದೇ ಬ್ಲಾಕ್ ಮಾರ್ಕೆಟ್ ರೇಟಾಗಿದೆ. ಆದ್ದರಿಂದ ಆ ಓಪನ್ ಮಾರ್ಕೆಟ್ ರೇಟನ್ನು ಕಡಮೆ ಮಾಡಲು ಸರ್ಕಾರದವರೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ?

ಶ್ರೀ ಬಿ. ಡಿ. ಜತ್ತಿ.—ಓಪನ್ ಮಾರ್ಕೆಟ್ ರೇಟನ್ನು ಬ್ಲಾಕ್ ಮಾರ್ಕೆಟ್ ರೇಟ್ ಎಂದು ಹೇಳುವುದು ಸರಿಯಲ್ಲ. ಮಾಲು ಹೆಚ್ಚಿಗೆ ಬಂದು ಡಿಮ್ಯಾಂಡ್ ಕಡಿಮೆಯಾದರೆ ಬೆಲೆ ಇಳಿಯುತ್ತೆ. ಡಿಮ್ಯಾಂಡ್ ಜಾಸ್ತಿ ಇದ್ದಾಗ ಸಪ್ಲೈ ಕಡಮೆಯಾದರೆ ಬೆಲೆ ಏರುತ್ತೆ. ಅದೇ ಬಿಜಿನೆಸ್ ಎನ್ನುವುದು.

ಶ್ರೀ ಎಂ. ನಾಗಪ್ಪ.—ಸರ್ಕಾರದವರು 3-4 ಜನಕ್ಕೆ ಅನುಕೂಲ ಮಾಡಲು ಸಕ್ಕರೆ ಧಾರಣೆಯನ್ನು ಹೆಚ್ಚಿಸಿ ಅದೇ ನೀತಿಯನ್ನು ದೇಶದಲ್ಲಿರತಕ್ಕ ಬಹು ಸಂಖ್ಯಾತ ರೈತರ ವಿಷಯದಲ್ಲಿ ಅನುಸರಿಸದೆ ಇರುವುದರಿಂದ ದೇಶದಲ್ಲಿರತಕ್ಕ ರೈತರಿಗೆ ಇದರಿಂದ ಬಹಳ ಅನ್ಯಾಯವಾಗಿದೆ ಅನ್ನುವುದು ಅವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ನಮಗೆ ಸಕ್ಕರೆ ಕಂಪೆನಿಯವರು ಸಕ್ಕರೆಯನ್ನು ಕೊಡತಕ್ಕ ದರದಲ್ಲಿ ಅವರಿಗೆ ಕಬ್ಬನ್ನು ಬೆಳೆಯತಕ್ಕ ರೈತರು ಕಬ್ಬನ್ನು ಮಾರಾಟ ಮಾಡುವುದಿಲ್ಲ. ಅವರಿನ್ನೂ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದರಿಂದ ರೈತರಿಗೆ ಇದರಿಂದ ನಷ್ಟವಾಗುವುದಿಲ್ಲ. ಇನ್ನೂ ಲಾಭ ಜಾಸ್ತಿ ಬರುತ್ತೆ.

ಉಪಾಧ್ಯಕ್ಷರು.—ಅಲ್ಪ ಕಾಲಾವಧಿ ಪ್ರಶ್ನೆ ಮುಗಿಯಿತು.

QUESTIONS FOR ANSWERS ON THE DAY

(but not taken up)

General Hospital at Mudigere

419. Sri K. H. RANGANATH (Mudigere).—

Will the Minister for Health and Housing be pleased to state :—

(*a*) whether there is a proposal to construct a General Hospital at Mudigere ; and if so, the estimated cost ;

(*b*) when the work would be taken up ?

A.—Sri K. PUTTASWAMY (Minister for Health and Housing).—

(*a*) Yes—the plans and estimates are not ready.

(*b*) In due course.

Children covered under compulsory Education Scheme

425. Sri G. MADEGOWDA (Kirugavalu).—

Will the Minister for Agriculture and Education be pleased to state :—

(*a*) how many children are covered under compulsory Primary Education Scheme in the State ;

(*b*) whether all these children attending the schools regularly ;

(*c*) the action taken by the Government on such parents who are not sending their children to schools ?

A.—Sri K. V. SHANKARA GOWDA (Minister for Agriculture and Education).—

(*a*) 22,61,470 children are covered under the Compulsory Primary Education Scheme.

(*b*) Average daily attendance is nearly 80 per cent.

(*c*) As the scheme is progressing well through persuasive methods penal provisions of the Act have not been invoked.